ಮೀಯಿಸ್ತಾರೆ, ಏನೇನೊ ಕಲ್ಮಶ ಬೆರೆತಿರತದೆ ಅಂತಾ ಓದತಾ ಬೆಳೆದಿದೇವೆ. ಈಗ ಮನಸು ಬರೋದಿಲ್ಲ' ಅಂದ ಹೊಳೆಯತ್ತ ನೋಡುತ್ತ.

ಅವಳು ಬಗ್ಗಿ ಕಾಲನ್ನು ಮತ್ತೆಮತ್ತೆ ತುರಿಸಿಕೊಳ್ಳುವುದನ್ನು ನೋಡಿದ. ಅರಿವಿಗೆ ಬಂತು.

'ತಡೀರಿ, ನೀವು ಕರಡದ ಹುಲ್ಲಿನ ಮಧ್ಯೆ ನುಗ್ಗಿದ್ರಲ್ಲ, ಅದರದ್ದು ಅದು. ಕರಡದ ಬೀಜ ಪ್ರಾಣಿಗಳ ಉಣ್ಣೆಗೆ ಮನುಷ್ಯರ ಬಟ್ಟೆಗೆ ಅಂಟಿಕೊಂಡು ಬೀಜಪ್ರಸಾರವಾಗ್ತದೆ. ಇವತ್ತು ನಿಮ್ಮನ್ನ ಬಳಸಿಕೊಂಡಿದೆ.' ಅಂದ. ಅವಳು ಬಗ್ಗಿ ನೋಡಿದರೆ ಕಂದುಬಣ್ಣದ ಅನೇಕಾನೇಕ ಸೂಜಿಗಳು ಮೊಳಕಾಲವರೆಗೆ ಸೀರೆಗೆಲ್ಲ ಚುಚ್ಚಿಕೊಂಡಿವೆ. ಬಗ್ಗಿ ಕೀಳುವ ಅವಳ ಕಷ್ಟನೋಡಿ, ತಡೆಯಿರಿ ಅಂದವ ಕುಕ್ಕುರುಗಾಲಲ್ಲಿ ಕುಳಿತು ಅವನ್ನೆಲ್ಲ ಕೀಳಲು ಸಹಾಯ ಮಾಡಿದ.

'ನೆಲ್ಲಿಕಾಯಿ ನೆನಪಿರುತ್ತೆ' ಅಂತ ನಕ್ಕಳು. ಸ್ವರದಲ್ಲಿ ಥ್ಯಾಂಕ್ಸ್ ಅನ್ನೋದು ಸುಪ್ತವಾಗಿತ್ತು. ಸ್ವಲ್ಪ ಸಮಯದಲ್ಲಿ ಕತ್ತಲಾಗುವುದಿತ್ತು. ಮರಳಿ ಹೊರಟರು. ಆನಂದನ ಹಸ್ತವನ್ನು ಹಿಡಿದು ನದಿ ದಾಟಿದರು. ಕಾಲುದಾರಿಯಲ್ಲಿ ಹೇಳಿದ ಆನಂದ: 'ಆವತ್ತು ನೀವು ಎಡವಿದಾಗ ನಾನು ನಿಮ್ಮ ರಟ್ಟೆ ಹಿಡಿದೆ. ನಟ ನಟಿಯರನ್ನು ಮುಟ್ಟಬೇಕೆನ್ನುವ ಸುಪ್ತವಾಂಛೆ ಜನರಲ್ಲಿರತದೆ. ಹೇಗೋ ಅವಕಾಶ ಬಳಸಿಕೋತಾರೆ ಅಂತ, ಕೆಲವು ಪ್ರಸಂಗಗಳ ಬಗ್ಗೆ ಸುದ್ದಿ ಓದಿದ್ದೆ. ನನ್ನ ಬಗ್ಗೆ ನೀವೂ ಹಾಗೆ ತಪ್ಪಾಗಿ ಅಂದುಕೊಂಡರೊ ಅಂತ ತಳಮಳವಾಗತಿತ್ತು.'

'ಈಗೇನನಿಸ್ತಿದೆ?...' ಕೇಳಿದಳು.

'ಆ ತಳಮಳವಿಲ್ಲ.' ಅಂದವ ನಂತರ ತಮಾಷೆಯ ದನಿಯಲ್ಲಿ '...ಬೇಕಿದ್ರೆ ಕರಡದ ಹುಲ್ಲಲ್ಲಿ ನನ್ನನ್ನ ಬೇಕಂತ್ಲೆ ಕೆಡವಿದರು ಅಂತ ಸುದ್ದಿ ಮಾಡಿ!' ಅಂದ. ಅವಳು ಹಹ್ಹಹ್ಹ ಅಂತ ಮುಕ್ತವಾಗಿ ನಕ್ಕಳು.

'ಹಾಗೆಲ್ಲ ಅಂದ್ಕೋಬೇಡಿ ಆನಂದ್, ಪ್ರಸ್ತುತವಾಗಿರಲು ಹರಿಯದೆ ಕೆಲವರು ಪ್ರಚಲಿತವಾದರೂ ಆಗಿರೋಣ ಅಂತ ಹೀಗೆಲ್ಲ ಮಾಡೋರಿದಾರೆ!'

'ಅಂದರೆ?...'

'ಪ್ರಸಿದ್ಧಿಯನ್ನು ಒಂದೇ ಸಮ ಉಳಿಸಿಕೊಳ್ಳೋದು ಸುಲಭವಲ್ಲ. ಶ್ರಮಪಡಬೇಕು. ಬದಲಾದ ಕಾಲಕ್ಕೆ ಪ್ರಸ್ತುತವಾಗೋ ಹಾಗೆ ಪ್ರತಿಭೆಯನ್ನು ತಿಕ್ಕಿ ಹೊಳೆಯೋ ಹಾಗಿಡ್ಬೇಕು. ಆ ಶ್ರಮ ಆಗದಿದ್ದವರು ತಮ್ಮ ಹೆಸರು ಆಗಾಗ ವರದಿಯಾಗೋ ಹಾಗೆ ಮಾಡಿಕೊಂಡು ಪ್ರಚಲಿತದಲ್ಲಿರೋ ಹುಚ್ಚಿಗಿಳೀತಾರೆ. ಇವರು ಮಾಡೋ ಸರ್ಕಸ್ಸಿನಿಂದಾಗಿ ನಿಜವಾದ ಸಂತ್ರಸ್ತರೂ ಸಂದೇಹಕ್ಕೀಡಾಗ್ತಾರೆ. ಅಂತವರು ಎಲ್ಲಾ ಕ್ಷೇತ್ರದಲ್ಲಿರತಾರೆ' ತರ್ಕಬದ್ಧ ಮಾತಿನಿಂದ ಪ್ರಭಾವಿತನಾದ ಆನಂದ.

'ನಿಮಗೆ ತುಂಬಾ ಓದೋ ಅಭ್ಯಾಸವಿದೆ ಅನಿಸ್ತಿದೆ.'

'ನಂಗೆ ಹೈಸ್ಕೂಲಲ್ಲಿರುವಾಗಿಂದ್ಲೆ ಒಬ್ಬ ಶಿಕ್ಷಕರಿಂದಾಗಿ ಆಸಕ್ತಿ ಶುರುವಾಯ್ತು. ಈಗ್ಲು ರಾತ್ರಿ ಮಲಗೋ ಮೊದಲು ಏನಾದ್ರೂ ಓದಲೇಬೇಕು.'

'... ಈ ಶೂಟಿಂಗು, ಗ್ಲಾಮರಿನ ಜೀವನದಲ್ಲಿ ಸಮಯ, ಆಸಕ್ತಿ ಉಳಿಸಿಕೊಳ್ಳಲಿಕ್ಕಾಗತದ?'

'ಗ್ಲಾಮರು ಅಂತೇನಿಲ್ಲ, ಅದೂ... ಅದೂ... ಬಿಡಿ ಮತ್ತೆ ಹೇಳತೀನಿ' ಮಾತು ನಿಲ್ಲಿಸಿದಳು.

ಆನಂದ ಏನೋ ಹೇಳಬೇಕೆನಿಸಿದವ ಸುಮ್ಮನಾದ. ಮನೆ ಸಮೀಪಿಸುತ್ತಿತ್ತು.

***

ರಾತ್ರಿ ಕೈಕಾಲು ತೊಳೆದು, ದೇವರಿಗೆ ನಮಸ್ಕಾರ ಮಾಡಿ ಸಾಮಾನು ದಾಸ್ತಾನಿಡುವ ಕೋಣೆಯತ್ತ ಬಂದವನನ್ನು ಬಕುಲಾ ಕೇಳಿದರು: 'ಆ ಹುಡುಗಿ ಕೇಳಿದ್ದಕ್ಕೆ ಹೂಂ ಅಂದೆ. ನಿನ್ನ ಕೆಲಸದಲ್ಲಿ ಅಡಚಣೆಯಾಯ್ತೇನೋ ಮಗು?'

'ಇಲ್ಲಾ ಅಜ್ಜಿ. ಸಂದೇಹ ಬಂದಿದ್ದು ಕೇಳಿಕೊಂಡು ಅವಳ ಪಾಡಿಗಿದ್ದಳು. ಪದವಿ ಮಾಡಿದಾಳಂತೆ. ತಿಳಕೊಳ್ಳೋ ಆಸಕ್ತಿಯಿದೆ.'

'ಅಜ್ಜಿ, ಅವಳು ನಮ್ಮನೆ ಇತಿಹಾಸದಿಂದ ಪ್ರಭಾವಿತಳಾಗಿದಾಳೆ. ಪೂರ್ವಿಕರ ಬಗ್ಗೆ ತಿಳಕೋಬೇಕಂತೆ. ನಿಜವಾದ ಖಡ್ಗ, ಢಾಲು ನೋಡ್ಬೇಕು ಅಂತ ಹೇಳತಾಳೆ. ತೋರಿಸಲಾ?'

ಬಕುಲಾ ದೊಡ್ಡ ಸಂಸಾರದಲ್ಲಿ ಮೇಲಿನ ಸ್ತರದ ವಿಚಾರವಂತರಲ್ಲಿ ಒಡನಾಡಿದವಳು. ಸಣ್ಣ ವಿಚಾರ ಮಾಡುವವರಲ್ಲ. ವಂಶದ ಹಿರಿಮೆ ಸಾರುವ ವಸ್ತುಗಳ ಬಗ್ಗೆ ಯಾರಾದರೂ ಆಸಕ್ತಿ ತೋರಿದರೆ ಅವರಿಗೂ ಹೆಮ್ಮೆಯೆ. 'ಆಗಲೋ, ತೋರಿಸು. ವಿಜಯದಶಮಿಗೊಮ್ಮೆ ನಾನೇ ಅದನ್ನು ತಿಕ್ಕಿಸಿ ಎಣ್ಣೆ ಸವರಿಸಿಡುತ್ತೇನೆ ಅಂತ ಹಾಗಿದೆ. ಇಲ್ಲವಾದರೆ ಯಾವಾಗಲೊ ಜಂಗು ತಿನ್ನುತ್ತಿತ್ತು!... ನಿನ್ನಜ್ಜನನ್ನೂ ಒಂದು ಮಾತು ಕೇಳು' ಅಂದರು.

6

ಸಣ್ಮುಗಂ ಮತ್ತೆ ಸುಂದರೇಶ, ನಾಯ್ಡುವನ್ನು ಮತ್ತೆ ಮತ್ತೆ ಕೇಳಿ ಹಿಂಸಿಸತೊಡಗಿದ್ದರು. ಸಿನಿಮಾ ಮಾಡುವ ಮಹತ್ವಾಕಾಂಕ್ಷೆ ನಾಯ್ಡುಗಿದ್ದೇ ಇತ್ತು. ಆದರೆ ಬೇಕಾದ ತಯಾರಿಯೇನೂ ಆಗಿರಲಿಲ್ಲ. ಅದನ್ನೆಲ್ಲ ಹಣ ಹಾಕಲು ಮುಂದೆ ಬಂದಿರುವವರೆದುರು ಬಿಟ್ಟುಕೊಡುವಂತಿಲ್ಲ. ಅಲ್ಲದೆ ಸ್ವಲ್ಪ ಹಣ ತೆಗೆದುಕೊಂಡೂ ಆಗಿತ್ತು. ವಿಷಯ ಸ್ವಲ್ಪ ಮುಂದುವರಿದ ಭಾವನೆ ಅವರಿಗೂ ಬರಬೇಕು ಅಂತ ನಾಯ್ಡು ಯೋಜನೆ ಹಾಕಿದ.

'ಹೀರೋಯಿನ್ ರೋಲಿಗೆ ಒಬ್ಬಳಾಗ್ಬಹುದೂಂತ ಆಯ್ಕೆ ಮಾಡಕೊಂಡಿದೀನಿ. ನಿಮಗೆ ಭೆಟ್ಟಿ ಮಾಡಿಸ್ತೀನಿ' ಅಂದ.

'ಮತ್ತೆ... ಹೀರೊ ರೋಲು, ಸೈಡ್ ರೋಲುಗಳಿಗೆಲ್ಲ ಯಾವಾಗ ಆಯ್ಕೆ ಮಾಡೋದು? ಬೇಕಿದ್ರೆ ಎರಡು ಹಿರೋಯಿನ್ನಿರಲಿ. ಗ್ಲಾಮರಾಗಿರುತ್ತೆ' ಅಂದ ಸುಂದರೇಶ.

'ಮಾಡೋಣ ಸರ್, ಕಥೇಲಿ ಎಲ್ಲಾ ಸೇರಿ ಬದಲಾವಣೆ ಮಾಡಿಕೋಬಹುದು. ಒಳ್ಳೇ ಫಿಲ್ಮ್ ಮಾಡೋಣ' ಅಂದುಬಿಟ್ಟ. ಅದು ಒಳ್ಳೇ ಸಲಹೆಯೂ ಹೌದು. ಹೇಗೂ ಹಣ ಹಾಕಲಿಕ್ಕೆ ತುದಿಕಾಲಲ್ಲಿ ನಿಂತಿದಾರೆ ಇವರು ಅಂದುಕೊಂಡ.

***

### ಕಾಡಂಚಿನಲ್ಲಿ ಚಿತ್ರೀಕರಣ

ಬೆಳಗ್ಗೆ ಬಂದ ನಾಯ್ಡು ಚಂದನಿಕಾಳನ್ನು ಕರೆದವ ಹತ್ತಿರದಲ್ಲೇ ಒಂದು ಲೊಕೇಶನಿದೆ. ಅಲ್ಲಿ ಅರ್ಧ ಗಂಟೆಯ ಚಿತ್ರೀಕರಣವಷ್ಟೆ. ತಿಳಿನೀಲಿ ಕೋಲ್ಕತ್ತ ಸೀರೆ ಸೆಟ್ ಉಟ್ಕೊ ಸಾಕು ಅಂದ. ಅವನ ಜೊತೆ ಸಿನಿ ವ್ಯಾನು, ಅದರಲ್ಲಿ ಜನ ಇದ್ದರು. ಅಮ್ಮ, ನೀವಿಲ್ಲೇ ಇದ್ಬಿಡಿ, ಸ್ವಲ್ಪಹೊತ್ತಿಗಾಗಿ ಈ ವ್ಯಾನಲ್ಲಿ ಮೈ ಯಾಕೆ ನುಗ್ಗು ಮಾಡಕೋತೀರ ಅಂತ ಅವನು ಅಂದಿದ್ದಕ್ಕೆ ಕಮಲಮ್ಮ ಮತ್ತೇನೂ ಹೇಳದೆ ಅಲ್ಲೆ ಉಳಿದಳು.

ಕಾಡಂಚಿನಲ್ಲಿ ಒಂದು ದೃಶ್ಯದ ಚಿತ್ರೀಕರಣವಾಯಿತು. ಆದರೆ ಅದರಲ್ಲಿ ಚಂದನಿಕಾಳ ಭಾಗವೇನೂ ಇರಲಿಲ್ಲ. ಕೇಳಿದ್ದಕ್ಕೆ, ಇಲ್ಲ, ಅವಳ ಭಾಗವನ್ನು ಕೊನೇ ಕ್ಷಣದಲ್ಲಿ ಬದಲಾಯಿಸಲಾಯಿತು, ಆದರೆ ಈ ದೃಶ್ಯವನ್ನು ಕಣ್ಣಾರೆ ನೋಡಿಕೊಂಡರೆ ಇದಕ್ಕೆ ಹೊಂದಿಕೆಯಾಗಿ ಮುಂದೆ ಬರುವ ದೃಶ್ಯದಲ್ಲಿ ಆಳಪರಿಣಾಮ ಬರುವಂತೆ ಅಭಿನಯ ನೀಡಲು ಚಂದನಿಕಾಳಿಗೆ ಸಹಕಾರಿಯಾಗುತ್ತದೆ ಅಂತ ಹೇಳಿದ. ಆಮೇಲೆ ತಾನು ಚಂದನಿಕಾಳನ್ನು ಅವಳ ಬಿಡಾರಕ್ಕೆ ತಲುಪಿಸುವುದಾಗಿಯೂ ಉಳಿದವರು ಅವರ ಬಿಡಾರಕ್ಕೆ ಪ್ಯಾಕಪ್ ಮಾಡಿ ಹೋಗಲಿ ಎಂದು ಹೇಳಿ ತನ್ನ ಕಾರಿಗೆ ಚಂದನಿಕಾಳನ್ನು ಕರೆದ. ಸ್ವಲ್ಪದೂರ ಹೋಗಿತ್ತು. ರಸ್ತೆಪಕ್ಕ ನಿಲ್ಲಿಸಿದವ ಇಳಿದು ಯಾರೊಂದಿಗೊ ಫೋನಲ್ಲಿ ಮಾತಾಡಿದ. ಕಾರಿನೊಳಗೆ ಬಂದು ಕುಳಿತವ ಹೇಳಿದ:

'ಎಂತಾ ಎಡವಟ್ಟಾಗಿ ಹೋಯ್ತು ಚಂದನಿಕಾ... ನನಗೆ ಸಂಜೆ ಹಣ ಕೊಡತೀನಿ ಅಂದವ ಈಗ ತಕ್ಷಣ ಬಾ ಅಂತಿದಾನೆ. ಒಂದು ಗಂಟೇಲಿ ಬರದಿದ್ರೆ ಆತಗೆ ಇನ್ನು ನಾಕು ದಿನ ಸಿಗಲಿಕ್ಕಾಗೋದಿಲ್ಲವಂತೆ. ವಿಜಯವಾಡಕ್ಕೆ ಹೋಗುತ್ತಿದ್ದಾನೆ. ಹೀಗೆ ಹೋಗಿ ಹಾಗೆ ಬಂದ್ಬಿಡೋಣ ಆಯ್ತಾ? ಹಣ ಸಿಗದಿದ್ರೆ ಚಿತ್ರೀಕರಣ ನಿಂತ್ಹೋಗುತ್ತೆ' ಅಂದ. ದನಿಯಲ್ಲಿ ಆತಂಕ ತುಂಬಿತ್ತು. ಅವಳಿಗೆ ಏನೂ ಹೇಳಲಾಗಲಿಲ್ಲ. ನಾಯ್ಡು ಕಾರನ್ನು ತಿರುಗಿಸಿದ. ಕಾರು ದಾಸನಕೊಪ್ಪ ದಾಟಿ ಹಾವೇರಿ ರಸ್ತೆ ಹಿಡಿಯಿತು. ಮುಕ್ಕಾಲು ತಾಸು ಪಯಣಿಸಿ ರಾಷ್ಟ್ರೀಯ ಹೆದ್ದಾರಿ ಪಕ್ಕದ ವಸತಿಗೃಹವೊಂದರ




**ನೆನಪು**

ಎಲ್ಲ ನೆನಪುಗಳನ್ನು ಮೂಟೆ ಕಟ್ಟಿ
ಹೊಳೆಗೆ ಎಸೆದಿದ್ದೆ!
ಅಲ್ಲಿ ಕರಗಿ ಆವಿಯಾಗಿ
ಮತ್ತೆ ಮತ್ತೆ ಮಳೆಯಾಗಿ
ನನ್ನನ್ನು ನೆನೆಸಿವೆ!

■ ಎಂ. ದತ್ತಾತ್ರೇಯ